## 2016 ಕ.ತೀ.ವ 1625

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್
## ಮತ್ತು
## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಪಿ.ಎಸ್. ದಿನೇಶ್ ಕುಮಾರ್

**ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ರ.ಸಾ. ನಿಗಮ, ಬೆಂಗಳೂರು –ವಿರುದ್ಧ– ಶ್ರೀ ಮಲ್ಲಿಕಾರ್ಜುನ @ ಮಲ್ಲಿಕಾರ್ಜುನಾಚಾರ್ ಮತ್ತು ಇತರರು***

ಮೋಟಾರು ವಾಹನಗಳ ಅಧಿನಿಯಮ, 1988ರ 173(1) ನೇ ಪ್ರಕರಣದಡಿಯಲ್ಲಿನ ಮೊದಲ ಸಂಕೀರ್ಣ ಅಪೀಲು.

ಈ ಅಪೀಲುಗಳನ್ನು ಅನುಕ್ರಮವಾಗಿ ನಿಗಮ ಮತ್ತು ಕ್ಲೇಮುದಾರರು, ಲಘು ವ್ಯಾಜ್ಯಗಳ ನ್ಯಾಯಾಲಯ ನ್ಯಾಯಾಧೀಶರು ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ ಬೆಂಗಳೂರು (ಎಸ್‌ಸಿಸಿಎಚ್–9) (ಸಂಕ್ಷಿಪ್ತತೆಗಾಗಿ ನ್ಯಾಯಾಧಿಕರಣ) ಇವರು ಎಂವಿಸಿ ಸಂ.2993/2013ರಲ್ಲಿ ದಿನಾಂಕ 14.11.2014ರಂದು ಹೊರಡಿಸಿದ ಇದೇ ಪ್ರಶ್ನಿತ ತೀರ್ಮ ಮತ್ತು ಐತೀರ್ಪಿನ ವಿರುದ್ಧ ಹೂಡಿದ್ದಾರೆ.

ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಪ್ರಮಾಣ ಅತೀ ಹೆಚ್ಚಾಗಿದೆ ಮತ್ತು ಮೃತರ ಆದಾಯಕ್ಕೆ ಪ್ರಮಾಣಬದ್ಧವಾಗಿಲ್ಲ. ಆದುದರಿಂದ ಇದನ್ನು ಇಳಿಸಲು ತಕ್ಕುದಾಗಿದೆಯೆಂದು ಮತ್ತು ನ್ಯಾಯಾಧಿಕರಣವು ನೋಂದಣಿ ಸಂ.ಕೆಎ 02, ವಿ–959ರ ಮೋಟಾರು ಬೈಕನ್ನು ಓಡಿಸುತ್ತಿದ್ದ ಮೃತನ ನಿರ್ಲಕ್ಷ್ಯತನವನ್ನು ಗುರುತಿಸುವಲ್ಲಿ ತಪ್ಪೆಸಗಿದೆಯೆಂದು, ಆದುದರಿಂದ, ಮೃತನ ಕಡೆಯಿಂದಾದ ನಿರ್ಲಕ್ಷ್ಯತನವನ್ನು ಯುಕ್ತವಾಗಿ ನಿಗದಿಪಡಿಸಿ ಅರ್ಜಿಯನ್ನು ತಳ್ಳಿಹಾಕಲು ತಕ್ಕುದಾಗಿದೆಯೆಂಬುದು ನಿಗಮದ ವಾದವಾಗಿದೆ. ನ್ಯಾಯಾಧಿಕರಣವು ನೀಡಿದ ನಷ್ಟಪರಿಹಾರ ಮತ್ತು ಬಡ್ಡಿದರದ ಪ್ರಮಾಣವು ಸಾಕಷ್ಟಿಲ್ಲವೆಂಬುದಾಗಿದ್ದು, ಯುಕ್ತವಾಗಿ ಹೆಚ್ಚಿಸುವುದು ಅಗತ್ಯವಾಗಿದೆಯೆಂಬುದು ಕ್ಲೇಮುದಾರರ ವಾದವಾಗಿದೆ.

*ಎಂ.ಎಫ್.ಎ. ಸಂಖ್ಯೆ: 1382/2015 (ಎಂವಿ) ಇದರೊಂದಿಗೆ ಇತರೆ, ದಿನಾಂಕ: 6ನೇ ಅಕ್ಟೋಬರ್, 2015.

ಲಘು ವ್ಯಾಜ್ಯಗಳು ಮತ್ತು ಎಸಿಎಂಎಂ ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದ ನ್ಯಾಯಾಧೀಶರು, ಬೆಂಗಳೂರು (ಎಸ್‌ಸಿಸಿಎಚ್–9) ಇವರು, ಎಂವಿಸಿ ಸಂ.2993/2013ರಲ್ಲಿ ಹೊರಡಿಸಲಾದ ದಿನಾಂಕ 14.11.2014ರ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ 80:20ರ ಅನುಪಾತದಲ್ಲಿ ಎಂದರೆ ನಿಗಮಕ್ಕೆ ಸೇರಿದ ಬಸ್‌ನ ಚಾಲಕನಿಗೆ ಶೇಕಡಾ 80ರಷ್ಟು ಮತ್ತು ನೋಂದಣಿ ಸಂ.ಕೆಎ.02 ವಿ. 959ನ್ನು ಹೊಂದಿರುವ ಮೋಟಾರು ಬೈಕ್‌ನ ಮೃತ, ಚಾಲಕನಿಗೆ ಶೇಕಡಾ 20ರಷ್ಟು ಅನುಪಾತದಲ್ಲಿ ನಿರ್ಲಕ್ಷ್ಯತನವನ್ನು ನಿಗದಿಪಡಿಸುವ ಮೂಲಕ ಹಾಗೂ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಸಂಪೂರ್ಣ ನಷ್ಟಪರಿಹಾರವು ನಗದೀಕರಣವಾಗುವವರೆಗೆ ಪ್ರತೀ ವರ್ಷಕ್ಕೆ ಶೇಕಡಾ 9ರ ಬಡ್ಡಿಯೊಂದಿಗಿನ 25,85,000/– ರೂ.ಗಳ ಬದಲು 26,90,000/– ರೂ. ನಷ್ಟ ಪರಿಹಾರವನ್ನು ನೀಡುವ ಮೂಲಕ ಮಾರ್ಪಾಡುಗೊಳಿಸಲಾಗಿದೆ ಎಂದು ನಿಗಮವು ಸಲ್ಲಿಸಿದ ಅಪೀಲು ಮತ್ತು ಕ್ಲೇಮುದಾರರು ಸಲ್ಲಿಸಿದ ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** — ***ಪ್ಯಾರಾಗಳಲ್ಲಿ***

1. *2009 ಎಸಿಜೆ 1298*
   *ಸರಳಾ ವರ್ಮ* — *(ಉಲ್ಲೇ) 11*

2. *2015 ಎಐಆರ್ ಎಸ್‌ಸಿಡಬ್ಲ್ಯೂ 3105 : (2015) 6 ಎಸ್‌ಸಿಸಿ 347*
   *ಮುನ್ನಾ ಲಾಲ್ ಜೈನ್ ಮತ್ತು ಮತ್ತೊಬ್ಬರು –ವಿರುದ್ಧ–*
   *ವಿಪಿನ್ ಕುಮಾರ್ ಶರ್ಮ ಮತ್ತು ಇತರರು* — *(ಉಲ್ಲೇ) 11*

3. *(2011) 3 ಎಸ್‌ಸಿಸಿ 566*
   *ಪಿ.ಎಸ್. ಸೋಮನಾಥನ್ ಮತ್ತು ಇತರರು –ವಿರುದ್ಧ–*
   *ಜಿಲ್ಲಾ ವಿಮಾ ಅಧಿಕಾರಿ ಮತ್ತು ಮತ್ತೊಬ್ಬರು* — *(ಉಲ್ಲೇ) 14*

ಅಪೀಲುದಾರರ ಪರ: ಶ್ರೀ ಡಿ. ವಿಜಯ ಕುಮಾರ್, ವಕೀಲರು
1 ರಿಂದ 4ನೇ ಪ್ರತ್ಯಪೀಲುದಾರರ ಪರ: ಶ್ರೀ ಕೆ.ಟಿ. ಗುರುದೇವ ಪ್ರಸಾದ್ ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀ ಎನ್.ಕೆ. ಪಾಟೀಲ್ :**

ಈ ಅಪೀಲುಗಳನ್ನು ಅನುಕ್ರಮವಾಗಿ ನಿಗಮ ಮತ್ತು ಕ್ಲೇಮುದಾರರು, ಲಘು ವ್ಯಾಜ್ಯಗಳ ನ್ಯಾಯಾಲಯ ನ್ಯಾಯಾಧೀಶರು ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣ ಬೆಂಗಳೂರು (ಎಸ್‌ಸಿಎಚ್–9) (ಸಂಕ್ಷಿಪ್ತತೆಗಾಗಿ ನ್ಯಾಯಾಧಿಕರಣ) ಇವರು ಎಂವಿಸಿ ಸಂ.2993/2013ರಲ್ಲಿ ದಿನಾಂಕ 14.11.2014ರಂದು ಹೊರಡಿಸಿದ ಇದೇ ಪ್ರಶ್ನಿತ ತೀರ್ಪು ಮತ್ತು ಐತೀರ್ಪಿನ ವಿರುದ್ಧ ಹೂಡಿದ್ದಾರೆ.

2. ನ್ಯಾಯಾಧಿಕರಣವು ತನ್ನ ತೀರ್ಪು ಮತ್ತು ಐತೀರ್ಪಿನಲ್ಲಿ ಶ್ರೀ ಹೇಮಂತ್ ಕುಮಾರ್ ಟಿ.ಎಂ.ರವರು ಮೃತರಾದ ಕಾರಣದಿಂದ ಕ್ಲೇಮುದಾರರ ಕ್ಲೇಮಿಗೆ ಪ್ರತಿಯಾಗಿ ನಿಗಮಕ್ಕೆ ಸೇರಿದ ಬಸ್‌ನ ಚಾಲಕನ ಕಡೆಯಿಂದಾದ ಸಂಪೂರ್ಣ ಹೊಣೆಗಾರಿಕೆಯನ್ನು ನಿಗದಿಪಡಿಸಿ ವಿವಿಧ ಶೀರ್ಷಿಕೆಗಳಡಿಯಲ್ಲಿ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅದರ ನಗದೀಕರಣವಾಗುವವರೆಗೆ ಪ್ರತೀ ವರ್ಷಕ್ಕೆ ಶೇಕಡಾ 6ರ ದರದ ಬಡ್ಡಿಯೊಂದಿಗೆ 25,85,000/– ರೂ. ಮೊತ್ತವನ್ನು ನೀಡಿದೆ.

3. ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಪ್ರಮಾಣ ಅತೀ ಹೆಚ್ಚಾಗಿದೆ ಮತ್ತು ಮೃತರ ಆದಾಯಕ್ಕೆ ಪ್ರಮಾಣಬದ್ಧವಾಗಿಲ್ಲ. ಆದುದರಿಂದ ಇದನ್ನು ಇಳಿಸಲು ತಕ್ಕುದಾಗಿದೆಯೆಂದು ಮತ್ತು ನ್ಯಾಯಾಧಿಕರಣವು ನೋಂದಣಿ ಸಂ.ಕೆಎ 02, ವಿ–959ರ ಮೋಟಾರು ಬೈಕನ್ನು ಓಡಿಸುತ್ತಿದ್ದ ಮೃತನ ನಿರ್ಲಕ್ಷ್ಯತನವನ್ನು ಗುರುತಿಸುವಲ್ಲಿ ತಪ್ಪೆಸಗಿದೆಯೆಂದು, ಆದುದರಿಂದ, ಮೃತನ ಕಡೆಯಿಂದಾದ ನಿರ್ಲಕ್ಷ್ಯತನವನ್ನು ಯುಕ್ತವಾಗಿ ನಿಗದಿಪಡಿಸಿ ಅರ್ಜಿಯನ್ನು ತಳ್ಳಿಹಾಕಲು ತಕ್ಕುದಾಗಿದೆಯೆಂಬುದು ನಿಗಮದ ವಾದವಾಗಿದೆ. ನ್ಯಾಯಾಧಿಕರಣವು ನೀಡಿದ ನಷ್ಟಪರಿಹಾರ ಮತ್ತು ಬಡ್ಡಿದರದ ಪ್ರಮಾಣವು ಸಾಕಷ್ಟಿಲ್ಲವೆಂಬುದಾಗಿದ್ದು, ಯುಕ್ತವಾಗಿ ಹೆಚ್ಚಿಸುವುದು ಅಗತ್ಯವಾಗಿದೆಯೆಂಬುದು ಕ್ಲೇಮುದಾರರ ವಾದವಾಗಿದೆ.

4. ಮೊಕದ್ದಮೆಯ ಸಂಗತಿಗಳು ಸಂಕ್ಷಿಪ್ತವಾಗಿ ಹೀಗಿವೆ:

ಕ್ಲೇಮುದಾರರು ಮೃತರ ಪೋಷಕರು ಮತ್ತು ಸಹೋದರಿಯರಾಗಿದ್ದಾರೆ. ಮೃತ ಹೇಮಂತ್ ಕುಮಾರ್ ಟಿ.ಎಂ.ರಸ್ತೆ ಸಂಚಾರದಲ್ಲಿ ಮೃತರಾದ ಕಾರಣದಿಂದ ಕ್ಲೇಮುದಾರರು, ದಿನಾಂಕ 2.01.2013ರಂದು ಮಧ್ಯಾಹ್ನ ಸುಮಾರು 12.50ಕ್ಕೆ ಮೃತರು ನೋಂದಣಿ ಸಂ.ಕೆಎ 02 ವಿ 959ನ್ನು ಹೊಂದಿರುವ ತನ್ನ ಮೋಟಾರು ಬೈಕ್‌ನಲ್ಲಿ ಸಾಯಿ ಟೆಲಿಕಾಮ್ ಅಂಗಡಿ ಎದುರಿನಲ್ಲಿರುವ ಕಾಟನ್‌ಪೇಟೆ ಮುಖ್ಯ ರಸ್ತೆಯಲ್ಲಿ ಹೋಗುತ್ತಿದ್ದು, ಆ ಸಮಯದಲ್ಲಿ ನೋಂದಣಿ ಸಂ.ಕೆಎ 10 ಎಫ್ 89ನ್ನು ಹೊಂದಿರುವ ಕರಾರಸಾನಿ ಬಸ್‌ನ ಚಾಲಕನು, ಮೃತನು ಹೋಗುತ್ತಿದ್ದ ಬೈಕ್‌ಗೆ ಅತೀವೇಗ ಮತ್ತು ನಿರ್ಲಕ್ಷ್ಯತನದ ರೀತಿಯಲ್ಲಿ ಬಂದು ಡಿಕ್ಕಿ ಹೊಡೆದಿದ್ದಾರೆಂದು ವಾದಿಸಿ, ನಷ್ಟಪರಿಹಾರವನ್ನು ಕೋರಿ ಮೋಟಾರು ವಾಹನ ಅಧಿನಿಯಮದ 166ನೇ ಪ್ರಕರಣದ ಮೇರೆಗೆ ನ್ಯಾಯಾಧಿಕರಣದ ಮುಂದೆ ಕ್ಲೇಮು ಅರ್ಜಿಯನ್ನು ಸಲ್ಲಿಸಿದ್ದಾರೆ. ಇದರಿಂದಾಗಿ ಮೃತರು ಕೆಳಗಡೆ ಬಿದ್ದಿದ್ದು ದೇಹದ ಮೇಲೆ ಬಸ್ಸು ಹರಿದುಹೋಗಿ ಅವನಿಗೆ ಮಾರಣಾಂತಕ ಗಾಯಗಳಾಗಿವೆ. ಕೂಡಲೇ ಅವನನ್ನು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ಸೇರಿಸಲಾಗಿದ್ದು, ರಸ್ತೆ ಸಂಚಾರ ಅಪಘಾತದಲ್ಲಿ ಉಂಟಾದ ಗಾಯಗಳಿಂದಾಗಿ ಆತ ಮೃತಪಟ್ಟಿದ್ದಾನೆ.

5. ಮೃತರಿಗೆ ಸುಮಾರು 27ವರ್ಷ ವಯಸ್ಸಾಗಿದ್ದು ಅಪಘಾತಕ್ಕೆ ಮೊದಲು ಗಟ್ಟಿಮುಟ್ಟಾದ ಆರೋಗ್ಯವಂತನಾಗಿದ್ದನೆಂದು, ಬೆಂಗಳೂರಿನ ಚನ್ನಮ್ಮ ಅಚ್ಚುಕಟ್ಟು ಪೊಲೀಸು ಠಾಣೆಯಲ್ಲಿ ಸಿವಿಲ್ ಪೊಲೀಸು ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತೀ ತಿಂಗಳು 16,998/– ರೂ. ಸಂಬಳ ಪಡೆಯುತ್ತಿದ್ದನೆಂಬುದು ಕ್ಲೇಮುದಾರರ ಮುಂದಿನ ವಾದವಾಗಿದೆ. ಅಕಾಲದಲ್ಲಿ ಆದ ಆತನ ಸಾವಿನಿಂದಾಗಿ, ಕ್ಲೇಮುದಾರರು, ಆತನ ಆದಾಯವನ್ನು ಸಂಪೂರ್ಣವಾಗಿ ಅವಲಂಬಿಸಿದ್ದುದರಿಂದ ಅವಲಂಬನೆಯ ನಷ್ಟದಿಂದ ಬಳಲುತ್ತಿದ್ದಾರೆ. ಪ್ರೀತಿ ವಾತ್ಸಲ್ಯವಲ್ಲದೆ, ಮಾನಸಿಕ ಆಘಾತ ಮತ್ತು ದಾರುಣ ವೇದನೆಗೆ ಒಳಗಾಗಿದ್ದಾರೆ.

6. ಸದರಿ ಕ್ಲೇಮು ಅರ್ಜಿಯನ್ನು ಪರಿಗಣನೆಗಾಗಿ ನ್ಯಾಯಾಧಿಕರಣದ ಮುಂದೆ ತೆಗೆದುಕೊಳ್ಳಲಾಗಿತ್ತು. ನ್ಯಾಯಾಧಿಕರಣವು, ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಿದ ನಂತರ ನಿಗಮಕ್ಕೆ ಸೇರಿದ ಬಸ್‌ನ ಚಾಲಕನಿಗೆ ಸಂಪೂರ್ಣ ಹೊಣೆಗಾರಿಕೆಯನ್ನು ಹೊರಿಸಿ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅದು ನಗದೀಕರಣವಾಗುವವರೆಗೆ ಪ್ರತೀ ತಿಂಗಳಿಗೆ ಶೇಕಡಾ 6 ರಂತೆ ವಿವಿಧ ಶೀರ್ಷಿಕೆಗಳಡಿಯಲ್ಲಿ 25,85,000/– ರೂ. ನಷ್ಟ ಪರಿಹಾರ ನೀಡಿ ಕ್ಲೇಮು ಅರ್ಜಿಯನ್ನು ಭಾಗಶಃ ಪುರಸ್ಕರಿಸಿತ್ತು.

7. ಸದರಿ ತೀರ್ಪು ಮತ್ತು ಐತೀರ್ಪಿನಿಂದ ಬಾಧಿತರಾಗಿರುವ ನಿಗಮ ಮತ್ತು ಕ್ಲೇಮುದಾರರು, ಮೇಲೆ ತಿಳಿಸಲಾದಂಥ ಯುಕ್ತ ಪರಿಹಾರಗಳನ್ನು ಕೋರಿ ಈ ಅಪೀಲುಗಳನ್ನು ಸಲ್ಲಿಸಿರುವರು.

8. ನಾವು ಈ ಅಪೀಲುಗಳಲ್ಲಿ ನಿಗಮದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮತ್ತು ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರ ವಾದಗಳನ್ನು ಆಲಿಸಿದ್ದೇವೆ.

9. ನಿಗಮದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಡಿ. ವಿಜಯಕುಮಾರ್‌ರವರ ನಿವೇದನೆಯೇನೆಂದರೆ, ಎರಡೂ ವಾಹನಗಳು ಅಪಘಾತಕ್ಕೆ ಒಳಗಾಗಿರುವುದರಿಂದ ಎರಡೂ ವಾಹನಗಳ ಚಾಲಕರ ಕಡೆಯಿಂದ ಸಮಾನವಾದ ನಿರ್ಲಕ್ಷ್ಯತೆಯಾಗಿದೆ. ನೋಂದಣಿ ಸಂ.ಕೆಎ 02 ವಿ–959ನ್ನು ಹೊಂದಿರುವ ಮೋಟಾರು ಬೈಕ್‌ನ ಚಾಲಕ ಮೃತನ ಕಡೆಯಿಂದಾದ ಯಾವುದೇ ನಿರ್ಲಕ್ಷ್ಯತನವನ್ನು ನಿಗದಿಪಡಿಸದೆ, ನಿಗಮಕ್ಕೆ ಸೇರಿದ ಬಸ್ ಚಾಲಕನ ಕಡೆಯಿಂದಾದ ಸಂಪೂರ್ಣ ನಿರ್ಲಕ್ಷ್ಯತನವನ್ನು ನಿಗದಿಪಡಿಸುವಲ್ಲಿ ಕ್ರಮಬದ್ಧವಾಗಿಲ್ಲದ ಕಡಿಮೆ ಮಾಹಿತಿಯಿಂದ ನ್ಯಾಯಾಧಿಕರಣವು ತಪ್ಪೆಸಗಿದೆಯೆಂಬುದಾಗಿದೆ. ಸದರಿ ನಿವೇದನೆಯನ್ನು ಸಮರ್ಥಿಸಲು ಅವರು, ಬಸ್‌ಗೆ ಯಾವುದೇ ರೀತಿಯ ಹಾನಿಯಾಗಿಲ್ಲ ಮತ್ತು ಮೋಟಾರುಬೈಕ್‌ಗೆ ಮಾತ್ರ ಹಾನಿಯಾಗಿದೆಯೆಂಬುದು ಸದರಿ ದಸ್ತಾವೇಜುಗಳ ಒಳಾಂಶಗಳಿಂದ ಸ್ಫಟಿಕದಷ್ಟು ಸ್ಪಷ್ಟವಾಗಿದೆಯೆಂಬುದನ್ನು ಮತ್ತು ರಸ್ತೆಯ

ಎಡಭಾಗದಿಂದ ಬಸ್ಸನ್ನು ಹಿಂದಿಕ್ಕುತ್ತಿರುವಾಗ, ಅವನದೇ ಸ್ವಂತ ನಿರ್ಲಕ್ಷ್ಯತನದ ಕಾರಣದಿಂದ ಅಪಘಾತ ಸಂಭವಿಸಿದ್ದು ಬಸ್‌ನ ಚಾಲಕನ ಕಡೆಯಿಂದ ಯಾವುದೇ ನಿರ್ಲಕ್ಷ್ಯತೆಯಾಗಿಲ್ಲವೆಂಬುದನ್ನು ಮೃತ ಮೋಟಾರು ಬೈಕ್ ಚಾಲಕನ ಕಡೆಯಿಂದಲೂ ನಿರ್ಲಕ್ಷ್ಯವಾಗಿರುವುದು ಮಹಜರಿನ ಒಳಾಂಶಗಳಿಂದ ಕಂಡುಬರುತ್ತದೆಯೆಂಬುದನ್ನು ನಿಶಾನೆ ಪಿ.3 ಸ್ಥೂಲ ನಿರೂಪಣೆ ನಿಶಾನೆ ಪಿ.4 ಮಹಜರು ಮತ್ತು ನಿಶಾನೆ ಪಿ.5 ಐಎಂವಿ ವರದಿಯ ಮೇಲೆ ಅವಲಂಬಿತರಾಗಿ ನಿವೇದಿಸಿದ್ದಾರೆ. ಆದರೆ ವಿಷಯದ ಈ ನೋಟವನ್ನು, ನಿರ್ಲಕ್ಷ್ಯತನವನ್ನು ಪರಿಗಣಿಸುವಾಗ ನ್ಯಾಯಾಧಿಕರಣವು ಪರಿಗಣಿಸಿಲ್ಲ ಅಥವಾ ಮೌಲ್ಯಮಾಪನ ಮಾಡಿಲ್ಲ. ಆದುದರಿಂದ ನಿಶಾನೆ ಪಿ3 ರಿಂದ ಪಿ.5ರ ವರೆಗಿನ ಒಳಾಂಶಗಳೊಂದಿಗೆ ಸೇರಿಸಲಾದ ಪ್ರತ್ಯರ್ಜಿದಾರ ಸಾಕ್ಷ್ಯ 1ರ ಸಾಕ್ಷ್ಯವನ್ನು ಮೌಲ್ಯಮಾಪನ ಮಾಡಲೇಬೇಕು. ಕಡೇ ಪಕ್ಷ ನ್ಯಾಯಾಧಿಕರಣವು, ಪ್ರತಿಯೊಬ್ಬರಿಗೆ ಶೇಕಡಾ 50ರ ದರದ ಅನುಪಾತದಲ್ಲಿ ಮಾಡಿರುವ ನಿರ್ಲಕ್ಷ್ಯತನವನ್ನು ನಿಗದಿಪಡಿಸಲೇಬೇಕು ಎಂದರೆ ನಿಗಮಕ್ಕೆ ಸೇರಿದ ಬಸ್ ಚಾಲಕನಿಗೆ ಶೇಕಡಾ 50ರಷ್ಟನ್ನು ಮತ್ತು ನೋಂದಣಿ ಸಂ.ಕೆಎ.02 ವಿ 959ನ್ನು ಹೊಂದಿರುವ ಮೋಟಾರು ಸವಾರ ಮೃತರಿಗೆ ಶೇಕಡಾ 50 ರಷ್ಟನ್ನು ನಿಗದಿಪಡಿಸಲೇಬೇಕು. ನಿಗಮಕ್ಕೆ ಸೇರಿದ ಬಸ್‌ನ ಚಾಲಕನ ಕಡೆಯಿಂದಾದ ಹೊರಿಸಲಾದ ಸಂಪೂರ್ಣ ಹೊಣೆಗಾರಿಕೆಗೆ ನ್ಯಾಯಾಧಿಕರಣವು ನೀಡಿದ ಕಾರಣವು, ದಾಖಲೆಯಲ್ಲಿರುವ ಸಾಕ್ಷ್ಯಕ್ಕೆ ತದ್ವಿರುದ್ಧವಾಗಿದೆ. ಆದುದರಿಂದ, ಅವರು, ಬಸ್ ಚಾಲಕನ ಕಡೆಗೆ ನಿಗದಿಪಡಿಸಲಾದ ಸಂಪೂರ್ಣ ಹೊಣೆಗಾರಿಕೆಯನ್ನು ತೆಗೆದುಹಾಕಿ ಎರಡೂ ವಾಹನಗಳ ಪ್ರತಿಯೊಬ್ಬ ಚಾಲಕರಿಂದಾದ ನಿರ್ಲಕ್ಷ್ಯತನವನ್ನು ಶೇಕಡಾ 50ರ ಅನುಪಾತದಲ್ಲಿ ಮರು ನಿಗದಿಪಡಿಸಬಹುದೆಂದು ನಿವೇದಿಸಿದ್ದಾರೆ.

10. ನಿಗಮದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು, ನ್ಯಾಯಾಧಿಕರಣವು ನೀಡಿದ ನಷ್ಟಪರಿಹಾರವು ಅತೀ ಹೆಚ್ಚಾಗಿದೆ ಮತ್ತು ನ್ಯಾಯಾಧಿಕರಣವು ಭವಿಷ್ಯಕ್ಕೆ ಸಂಬಂಧಪಟ್ಟಂತೆ ಶೇ.50ರಷ್ಟನ್ನು ಸೇರಿಸುವಲ್ಲಿ ಮತ್ತು ಅವಲಂಬಿತರಿಗಾದ ನಷ್ಟವನ್ನು ಲೆಕ್ಕ ಹಾಕುವಾಗ ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯವು ವಿಧಿಸಲಾದ ಕಾನೂನಿಗೆ ವಿರುದ್ಧವಾಗಿ ಮೃತರ ವಯಸ್ಸನ್ನು '17'ರ ಗುಣಕಕ್ಕೆ ಅನ್ವಯಿಸಿ ತೆಗೆದುಕೊಂಡು ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ. ಅಲ್ಲದೆ, ಅವರು,

ನ್ಯಾಯಾಧಿಕರಣವು ಮೃತನ ತಾಯಿಯ ವಯಸ್ಸನ್ನು 46 ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಂಡು ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ. ಆದುದರಿಂದ ಅವರು, ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು, ಮೋಟಾರು ಬೈಕ್‌ನ ಚಾಲಕ, ಮೃತರ ಕಡೆಯಿಂದಾದ ಯುಕ್ತ ನಿರ್ಲಕ್ಷ್ಯತನವನ್ನು ನಿಗದಿಪಡಿಸುವ ಮೂಲಕ ಮತ್ತು ಯುಕ್ತವಾಗಿ ನಷ್ಟಪರಿಹಾರವನ್ನು ಇಳಿಸುವ ಮೂಲಕ ಮಾರ್ಪಡಿಸಲು ತಕ್ಕುದಾಗಿದೆಯೆಂದು ನಿವೇದಿಸಿದ್ದಾರೆ.

11. ಮತ್ತೊಂದು ಕಡೆಯಲ್ಲಿ, ಇವುಗಳ ಜೊತೆಗೆ ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರಾದ ಶ್ರೀ ಕೆ.ಟಿ. ಗುರುದೇವ ಪ್ರಸಾದ್‌ರವರು, ಮೃತರು ಸುಮಾರು 27 ವರ್ಷ ವಯಸ್ಸಿನವರಾಗಿದ್ದು, ಪೊಲೀಸು ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು ನಿಶಾನೆ ಪಿ.9ರ ಪ್ರಕಾರ 16,998ರೂ. ವೇತನವನ್ನು ಪಡೆಯುತ್ತಿದ್ದರು. ಆದುದರಿಂದ ನ್ಯಾಯಾಧಿಕರಣವು ವರದಿಯಾದ ***ಸರಳಾ ವರ್ಮ*** [1] ರವರ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ವಿಧಿಸಿದ ಕಾನೂನನ್ನು ದೃಷ್ಟಿಯಲ್ಲಿಟ್ಟುಕೊಂಡು ಭವಿಷ್ಯದ ನೋಟದ ಸಂಬಂಧದಲ್ಲಿ ಮತ್ತು ಮೃತರ ವಯಸ್ಸನ್ನು 27 ವರ್ಷಗಳೆಂದು ಲೆಕ್ಕಕ್ಕೆ ತೆಗೆದುಕೊಂಡು '17'ರ ಗುಣಕವನ್ನು ಅನ್ವಯಿಸಿ ಶೇಕಡಾ 50ರಷ್ಟನ್ನು ಸೇರಿಸಿ ಪ್ರತಿ ತಿಂಗಳು 16,600/– ರೂ.ನಂತೆ ಮೃತರ ಆದಾಯವನ್ನು ನಿರ್ಧರಿಸಿರುವುದನ್ನು ಸಮರ್ಥಿಸಿಕೊಂಡಿದೆ. ಸರ್ವೋಚ್ಚ ನ್ಯಾಯಾಲಯವು ಮೃತರ ವಯಸ್ಸನ್ನು ದೃಷ್ಟಿಯಲ್ಲಿಟ್ಟುಕೊಂಡು ಗುಣಕವನ್ನು ತಃಖ್ತೆಯಿಂದ ಆಯ್ಕೆ ಮಾಡಿಕೊಳ್ಳಬೇಕು ಎಂದು ಸರ್ವೋಚ ನ್ಯಾಯಾಲಯವು, ***ಮುನ್ನಾಲಾಲ್ ಜೈನ್ ಮತ್ತು ಮತ್ತೊಬ್ಬರು –ವಿರುದ್ಧ– ವಿಪಿನ್ ಕುಮಾರ್ ಶರ್ಮ ಮತ್ತು ಇತರರು*** [2], ಪ್ರಕರಣದಲ್ಲಿನ ಸದರಿ ತೀರ್ಪಿನ 13ನೇ ಪ್ಯಾರಾದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪಿನಲ್ಲಿ ನಂಬಿಕೆಯಿಟ್ಟು ಅವರು ವಾದಿಸಿರುವುದು '17'ರ ಗುಣಕವನ್ನು ಅನ್ವಯಿಸುವುದಕ್ಕೆ ಸಂಬಂಧಪಡುತ್ತದೆ ಆದುದರಿಂದ ನ್ಯಾಯಾಧಿಕರಣವು 27 ವರ್ಷಗಳೆಂದು ಮೃತರ ವಯಸ್ಸನ್ನು ತೆಗೆದುಕೊಂಡು '17'ರ ಗುಣಕವನ್ನು ಅಳವಡಿಸಿಕೊಂಡಿರುವುದು ಸಮರ್ಥನೀಯವಾಗಿದೆ ಮತ್ತು ಈ ನ್ಯಾಯಾಲಯದ ಮಧ್ಯ ಪ್ರವೇಶವನ್ನು ಕೋರಿರುವುದಿಲ್ಲ.

1. 2009 ಎಸಿಜೆ 1298
2. 2015 ಎಐಆರ್ ಎಸ್‌ಪಿಡಬ್ಲ್ಯೂ 3105 : (2015) 6 ಎಸ್‌ಸಿಸಿ 347

ಅಲ್ಲದೆ, ನ್ಯಾಯಾಧಿಕರಣವು, ಪ್ರೀತಿ ವಾತ್ಸಲ್ಯದ ನಷ್ಟ, ಸಂಪದದ ನಷ್ಟಕ್ಕೆ ಸಂಬಂಧಿಸಿದಂತೆ ಯುಕ್ತ ನಷ್ಟ ಪರಿಹಾರವನ್ನು ನೀಡುವಲ್ಲಿ ತಪ್ಪೆಸಗಿದೆಯೆಂದು ನಿವೇದಿಸಿದ್ದಾರೆ ಮತ್ತು ಏನನ್ನು ನೀಡಿದೆಯೋ ಅದು ಸಾಕಾಗುವುದಿಲ್ಲ ಮತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯದ ತೀರ್ಪನ್ನು ಪರಿಗಣನೆಗೆ ತೆಗೆದುಕೊಂಡರೆ ಯುಕ್ತವಾಗಿ ಹೆಚ್ಚಿಸಬೇಕಾಗುತ್ತದೆ. ಅಲ್ಲದೆ, ನೀಡಲಾದ ಬಡ್ಡಿಯದರ ತುಂಬಾ ಕಡಿಮೆಯಿದೆ ಮತ್ತು ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯದ ತೀರ್ಪನ್ನು ಲೆಕ್ಕಕ್ಕೆ ತೆಗೆದುಕೊಂಡರೆ ಕನಿಷ್ಟ ಪಕ್ಷ ಶೇಕಡಾ 9 ರಿಂದ 10ರಷ್ಟನ್ನು ಯುಕ್ತವಾಗಿ ಹೆಚ್ಚಿಸಲು ತಕ್ಕುದಾಗಿದೆಯೆಂದು ನಿವೇದಿಸಿದ್ದಾರೆ.

ಅಲ್ಲದೆ, ಅಜಾಗರೂಕತೆಯ ಸಂಬಂಧದಲ್ಲಿ ಅವರು, ಮೃತ ಮೋಟಾರು ಬೈಕ್ ಚಾಲಕನಿಗೆ ಶೇಕಡಾ 50ರಷ್ಟು ನಿರ್ಲಕ್ಷ್ಯತನವನ್ನು ನಿಗದಿ ಮಾಡಬೇಕು ಎಂದು ನಿಗಮದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಮಾಡಿದ ನಿವೇದನೆಯಲ್ಲಿ ಯಾವುದೇ ಬಲವಿಲ್ಲವೆಂದು ಮತ್ತು ಇದು ತಿರಸ್ಕರಿಸಲು ತಕ್ಕುದಾಗಿದೆಯೆಂದು ನಿವೇದಿಸಿದ್ದಾರೆ. ಸದರಿ ನಿವೇದನೆಯನ್ನು ಸಮರ್ಥಿಸಲು, ಅವರು, ನಿರ್ಣಾಯಕ ರುಜುವಾತುಗಳಾದ ಬಸ್ ಚಾಲಕನ ವಿರುದ್ಧ ಸಲ್ಲಿಸಲಾದ ನಿಶಾನೆ ಪಿ1 ನ್ನು ಮತ್ತು ದೋಷಾರೋಪ ಪಟ್ಟಿಯ ಒಳಾಂಶಗಳ ಮೂಲಕ ನಮ್ಮನ್ನು ಯೋಚಿಸುವ ಹಾಗೆ ಮಾಡಿದ್ದಾರೆ ಮತ್ತು ನಿಶಾನೆ ಪಿ5 – ಐಎಂವಿ ವರದಿಯ ಒಳಾಂಶಗಳಿಂದ, ಮೃತರಾದ, ಮೋಟಾರು ಬೈಕ್ ಚಾಲಕನ ಕಡೆಯಿಂದ ನಿರ್ಲಕ್ಷ್ಯವಾಗಿಲ್ಲವೆಂದು ಮತ್ತು ಮೃತರ ಹಿಂದಿನಿಂದ ಬಂದಿರುವ ಬಸ್‌ನ ಚಾಲಕನು ಮೋಟಾರು ಬೈಕ್‌ಗೆ ಡಿಕ್ಕಿ ಹೊಡೆದ ಕಾರಣದಿಂದ ಅಪಘಾತ ಸಂಭವಿಸಿದ್ದು ಅದರಿಂದಾಗಿ ಮೃತನು ಕೆಳಗೆ ಬಿದ್ದು, ಬಸ್ಸು ಅವನ ಮೇಲೆ ಹರಿದು ಮಾರಣಾಂತಕ ಗಾಯಗಳಾಗಿ ಆತನು ಮರಣ ಹೊಂದಿದ್ದಾನೆಂದು ನಿವೇದಿಸಿದ್ದಾರೆ. ಆದುದರಿಂದ, ನಿಗಮಕ್ಕೆ ಸೇರಿದ ಬಸ್‌ನ ಚಾಲಕನ ಮೇಲೆ ಸಂಪೂರ್ಣ ನಿರ್ಲಕ್ಷ್ಯವನ್ನು ಹೊರಿಸಿ ನ್ಯಾಯಾಧಿಕರಣವು ನೀಡಿರುವ ತೀರ್ಪು ಯುಕ್ತ ಮತ್ತು ನ್ಯಾಯ ಸಮ್ಮತವಾಗಿದ್ದು ಈ ನ್ಯಾಯಾಲಯದ ಹಸ್ತಕ್ಷೇಪವನ್ನು ಬಯಸುವಂತಿಲ್ಲವೆಂದು ನಿವೇದಿಸಿದ್ದಾರೆ.

12. ಪಕ್ಷಕಾರರ ಪರವಾಗಿ ಹಾಜರಾದ ಮಾನ್ಯ ವಕೀಲರು ವಾದವನ್ನು ಆಲಿಸಿದ ತರುವಾಯ ಮತ್ತು ನ್ಯಾಯಾಧಿಕರಣವು ಹೊರಡಿಸಿದ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಒಳಗೊಂಡಂತೆ ದಾಖಲೆಯಲ್ಲಿ ಲಭ್ಯವಿರುವ ಸಾಮಗ್ರಿಯನ್ನು ಎಚ್ಚರಿಕೆಯಿಂದ ಅವಲೋಕಿಸಿದ ನಂತರ ನಮ್ಮ ಪರಿಗಣನೆಗೆ ಈ ಮುಂದಿನ ಅಂಶಗಳು ಉದ್ಭವಿಸಿವೆ.

(i) ನ್ಯಾಯಾಧಿಕರಣವು ನಿಗಮಕ್ಕೆ ಸೇರಿದ ಬಸ್ ಚಾಲಕನಿಗೆ ಸಂಪೂರ್ಣ ನಿರ್ಲಕ್ಷ್ಯತನವನ್ನು ನಿಗದಿಪಡಿಸಿರುವುದು ಕಾನೂನಿನಲ್ಲಿ ಸಮರ್ಥನೀಯವಾಗಿದೆಯೇ?

(ii) ನ್ಯಾಯಾಧಿಕರಣವು ನೀಡಿದ ನಷ್ಟ ಪರಿಹಾರದ ಪರಿಮಾಣವು ನ್ಯಾಯಸಮ್ಮತ ಮತ್ತು ಯುಕ್ತವಾಗಿದೆಯೇ?

**ಮರು ಪರಿಶೀಲನಾಂಶ ಸಂಖ್ಯೆ 1:**

13. ಅಪಘಾತ ಸಂಭವಿಸಿದ್ದು ಮೃತನು ಮರಣ ಹೊಂದಿರುವುದರಲ್ಲಿ ಯಾವುದೇ ವಿವಾದವಿಲ್ಲ. ಮೃತರು ಸುಮಾರು 27 ವರ್ಷದವರಾಗಿದ್ದು ಸಿವಿಲ್ ಪೊಲೀಸು ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದರು ಮತ್ತು ಕ್ಲೇಮುದಾರರು ಅವರ ತಂದೆ ತಾಯಿಗಳು ಮತ್ತು ಸಹೋದರಿಯರಾಗಿದ್ದಾರೆ. ಎರಡೂ ವಾಹನಗಳು ಎಂದರೆ ನೋಂದಣಿ ಸಂ.ಕೆಎ 10 ಎಫ್ 89ನ್ನು ಹೊಂದಿರುವ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ಮತ್ತು ನೋಂದಣಿ ಸಂ.ಕೆಎ 02 ವಿ–959ನ್ನು ಹೊಂದಿರುವ ಮೋಟಾರು ಬೈಕ್ ಅಪಘಾತಕ್ಕೀಡಾಗಿವೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ. ಅಲ್ಲದೆ, ದಾಖಲೆಯಲ್ಲಿರುವ ಮಾಹಿತಿಯಿಂದ, ನ್ಯಾಯಾಧಿಕರಣವು ಪ್ರಥಮ ಮಾಹಿತಿ ವರದಿಯ ನಿಶಾನೆ ಪಿ1 – ಪ್ರತಿಯ ಆಧಾರದ ಮೇಲೆ, ತನ್ನ ತೀರ್ಪಿನ ಕಂಡಿಕೆ 13ರಲ್ಲಿ ಅದನ್ನು ಚರ್ಚಿಸಿದ ನಂತರ, ಅಪಘಾತದ ಕಾರಣದಿಂದ, ತನ್ನ ಮೋಟಾರು ಬೈಕಿನಲ್ಲಿ ಹೋಗುತ್ತಿದ್ದ ಮೃತನು ಕೆಳಗೆ ಬಿದ್ದು ಅವನ ಮೇಲೆ ಬಸ್ ಹರಿದು, ಗಾಯಗಳಾದ ಕಾರಣದಿಂದ ಅವನು ಮೃತನಾಗಿದ್ದಾನೆಂದು ಅಭಿಪ್ರಾಯಪಟ್ಟಿದೆಯೆಂಬುದು ಕಂಡು ಬರುತ್ತದೆ. ಅಲ್ಲದೆ, ನ್ಯಾಯಾಧಿಕರಣವು,

ಅಧಿಕಾರ ವ್ಯಾಪ್ತಿಯುಳ್ಳ ಪೊಲೀಸರು, ನಿಶಾನೆ ಪಿ2ರ ಪ್ರಕಾರ ಕರಾರಸಾನಿ ಬಸ್ ಚಾಲಕನ ವಿರುದ್ಧ ಆರೋಪಪಟ್ಟಿಯನ್ನು ಸಲ್ಲಿಸಿದ್ದಾರೆ ಮತ್ತು ನಿಶಾನೆ ಪಿ3 ಸ್ಥೂಲ ಚಿತ್ರ ಮತ್ತು ನಿಶಾನೆ ಪಿ4 – ಸ್ಥಳ ಮಹಜರಿನಲ್ಲಿರುವ ಒಳಾಂಶಗಳು ಕರಾರಸಾನಿ ಬಸ್ ಚಾಲಕನ ನಿರ್ಲಕ್ಷ್ಯತನದ ಚಾಲನೆಯಿಂದಾಗಿ ಅಪಘಾತ ಸಂಭವಿಸಿತೆಂಬುದು ಸಾಬೀತಾಗುತ್ತದೆಯೆಂದು ಮತ್ತು ನಿಶಾನೆ ಪಿ5 ಐಎಂವಿ ವರದಿಯು, ಅಪಘಾತ ನಡೆಯಲು ಕಾರಣವಾದ ಅಪಘಾತಕ್ಕೊಳಗಾದ ವಾಹನಗಳಲ್ಲಿ ಯಾವುದೇ ಯಾಂತ್ರಿಕ ಕೊರತೆ ಇರಲಿಲ್ಲವೆಂಬುದನ್ನು ತೋರಿಸುತ್ತದೆಂದು ಅಭಿಪ್ರಾಯಪಟ್ಟಿದೆ.

ನ್ಯಾಯಾಧಿಕರಣವು ನಿಶಾನೆ ಪಿ.4 ಮತ್ತು ನಿಶಾನೆ ಪಿ.5ರ ಒಳಾಂಶಗಳನ್ನು ಯುಕ್ತವಾಗಿ ಮೌಲ್ಯಮಾಪನ ಮಾಡುವಲ್ಲಿ ತಪ್ಪೆಸಗಿದೆಯೆಂಬುದನ್ನು ಗಮನಿಸುವುದು ಪ್ರಮುಖವಾಗಿದೆ. ನಿಶಾನೆ ಪಿ.5ರಲ್ಲಿ ಎರಡೂ ವಾಹನಗಳಿಗೆ ಆಗಿರುವ ಹಾನಿಯ ಸ್ವರೂಪವನ್ನು ಆರ್.ಟಿ.ಓ ನ ಸ್ವತಂತ್ರ ಅಧಿಕಾರಿಯು ವಿವರಿಸಿದ್ದರು. ನಿಶಾನೆ ಪಿ.4 ಮತ್ತು ಪಿ.5ರ ಒಳಾಂಶಗಳಿಂದ, ನಿಗಮದ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸಲ್ಲಿಸಿದ ನಿವೇದನೆಗಳಲ್ಲಿ ನಾವು, ಮೋಟಾರು ಬೈಕ್‌ನ ಚಾಲಕ ಮೃತನು ಬಸ್ಸನ್ನು ಎಡಗಡೆಯಿಂದ ಹಿಂದಿಕ್ಕಲು ಪ್ರಯತ್ನಿಸಿರುವಾಗ ಅವನು ಬಸ್‌ನ ಮುಂದುಗಡೆ ಬಂದಿದ್ದರಿಂದ ಅವನಿಂದಾದ ಕೆಲವು ನಿರ್ಲಕ್ಷ್ಯತನದಿಂದ ಅಪಘಾತ ಸಂಭವಿಸಲು ಕಾರಣವಾಗಿದೆಯೆಂಬುದನ್ನು ನಾವು ಗುರುತಿಸಿದ್ದೇವೆ. ಆದುದರಿಂದ ಮೋಟಾರು ಬೈಕ್‌ನ ಚಾಲಕ, ಮೃತರ ಕಡೆಯಿಂದ ಶೇಕಡಾ 20ರಷ್ಟರ ಮಟ್ಟಿಗೆ ಮತ್ತು ಬಸ್ ಚಾಲಕನಿಂದ ಶೇಕಡಾ 80ರಷ್ಟರ ಮಟ್ಟಿಗೆ ನಿರ್ಲಕ್ಷ್ಯವಾಗಿದೆಯೆನ್ನುವ ಕಡತದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜೀಯ ಸಾಕ್ಷ್ಯವನ್ನು ಮರು ಮೌಲ್ಯಮಾಪನ ಮಾಡಿದ ನಂತರ ನಾವು ಪರಿಗಣಿತ ಅಭಿಪ್ರಾಯ ಹೊಂದಿದ್ದೇವೆ. ತದನುಸಾರವಾಗಿ, ನಾವು, ಈ ಮೂಲಕ ನಿಗಮಕ್ಕೆ ಸೇರಿದ ಬಸ್‌ನ ಚಾಲಕನಿಗೆ ನ್ಯಾಯಾಧಿಕರಣವು ನಿಗದಿ ಮಾಡಿದ ಸಂಪೂರ್ಣ ನಿರ್ಲಕ್ಷ್ಯತನವನ್ನು ತಳ್ಳಿಹಾಕಿದ್ದು, 80:20ರ ಅನುಪಾತದಲ್ಲಿ ಬಸ್ ಚಾಲಕನಿಗೆ

ಶೇಕಡಾ 80ರಷ್ಟು ಮೃತ, ಮೋಟಾರು ಬೈಕ್‌ನ ಚಾಲಕನಿಗೆ ಶೇಕಡಾ 20ರಷ್ಟನ್ನು ಮರು ನಿಗದಿ ಮಾಡಿರುತ್ತೇವೆ.

**ಮರು–ಪರಿಶೀಲನಾಂಶ 2:**

14. ಕ್ಲೇಮುದಾರರು ಮೃತರ ಪೋಷಕರು ಮತ್ತು ಸಹೋದರಿಯರಾಗಿದ್ದಾರೆ. ಮೃತರು ಸುಮಾರು 27 ವರ್ಷ ವಯಸ್ಸಿನವರಾಗಿದ್ದು, ಅಪಘಾತಕ್ಕೂ ಮೊದಲು ದೃಢಕಾಯ ಮತ್ತು ಆರೋಗ್ಯವಂತ ವ್ಯಕ್ತಿಯಾಗಿದ್ದು, ಪೊಲೀಸು ಪೇದೆಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ನಿಶಾನೆ ಪಿ.9 ವೇತನ ಪ್ರಮಾಣಪತ್ರದ ಪ್ರಕಾರ ಪ್ರತೀ ತಿಂಗಳು 16,998/– ರೂ. ಸಂಬಳವನ್ನು ಪಡೆಯುತ್ತಿದ್ದರೆಂಬುದು ಕ್ಲೇಮುದಾರರ ವಾದವಾಗಿದೆ. ನ್ಯಾಯಾಧಿಕರಣವು, ಮೃತರ ನಿವ್ವಳ ಆದಾಯವನ್ನು ಪ್ರತಿ ತಿಂಗಳಿಗೆ 16,600/–ರಂತೆ ತೆಗೆದುಕೊಂಡು, ಭತ್ಯೆಗಳ ಸಂಬಂಧದಲ್ಲಿ 398/– ರೂ. ಕಳೆದ ನಂತರ, ***ಸರಳ ವರ್ಮಾ*** ಮೇಲಿನ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಲೆಕ್ಕಕ್ಕೆ ತೆಗೆದುಕೊಂಡು ಭವಿಷ್ಯವರ್ತಿಯ ಸಂಬಂಧದಲ್ಲಿ ಶೇಕಡಾ 50 ರಂತೆ 16,600/– ರೂ.ಗಳನ್ನು ಸೇರಿಸಿ, ಅವನ ಒಟ್ಟು ಮಾಸಿಕ ಆದಾಯವನ್ನು 24,900/–ರಂತೆ ನಿಗದಿಪಡಿಸಿದೆ ಮತ್ತು ವಾರ್ಷಿಕವಾಗಿ 2,98,800/– ರೂ.ಗಳನ್ನು ಅವನು ಅವಿವಾಹಿತನಾಗಿದ್ದರಿಂದ ಮೃತನ ವೈಯಕ್ತಿಕ ಮತ್ತು ಜೀವನ ವೆಚ್ಚಗಳ ಸಂಬಂಧದಲ್ಲಿ ಶೇಕಡಾ 50ರಷ್ಟನ್ನು ಕಳೆದ ನಂತರ, ಮೃತರ ವಯಸ್ಸನ್ನು ತೆಗೆದುಕೊಂಡು '17'ರ ಗುಣಕವನ್ನು ಅನ್ವಯಿಸಿ, ಅವಲಂಬಿತರ ನಷ್ಟದ ಸಂಬಂಧದಲ್ಲಿ 25,40,000/– ಮೊತ್ತದ ರೂ.ಗಳನ್ನು ನೀಡಿದೆ. ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಗುರುತಿಸಲಾದಂತೆ ಸರಿಯಾಗಿ, ಮೃತರ ವಯಸ್ಸನ್ನು ತೆಗೆದುಕೊಂಡು ನ್ಯಾಯಾಧಿಕರಣವು ಅಳವಡಿಸಲಾದ '17'ರ ಗುಣಕವು ನ್ಯಾಯ ಸಮ್ಮತ ಮತ್ತು ಯುಕ್ತವಾಗಿರುತ್ತದೆ ಮತ್ತು ಸರ್ವೋಚ್ಚ ನ್ಯಾಯಾಲಯವು ವಿಧಿಸಲಾದ ಕಾನೂನುಗಳನ್ನು ಪರಿಗಣನೆಗೆ ತೆಗೆದುಕೊಂಡು ಇದು ಹಸ್ತಕ್ಷೇಪವನ್ನು ಅಪೇಕ್ಷಿಸುವುದಿಲ್ಲ. ಸರ್ವೋಚ್ಚ ನ್ಯಾಯಾಲಯ ಪ್ರಕರಣಗಳು ***ಪಿ.ಎಸ್. ಸೋಮನಾಥನ್ ಮತ್ತು ಇತರರು –ವಿರುದ್ಧ– ಜಿಲ್ಲಾ ವಿಮಾ ಅಧಿಕಾರಿ ಮತ್ತು ಮತ್ತೊಬ್ಬರು*** [3], ಪ್ರಕರಣದಲ್ಲಿ

3. (2011) 3 ಎಸ್‌ಸಿಸಿ 566

16ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಈ ಮುಂದಿನಂತೆ ಅಭಿಪ್ರಾಯಪಟ್ಟಿದೆ:

> "16. ಉಚ್ಚ ನ್ಯಾಯಾಲಯವು ದುರಾದೃಷ್ಟವಶಾತ್ ಗುಣಕವನ್ನು ಅನ್ವಯಿಸುವಲ್ಲಿ ತುಂಬಾ ತಾಂತ್ರಿಕ ದೃಷ್ಟಿಕೋನವನ್ನು ತಳೆದಿದೆ. ಮಗಳನ್ನು ದಾವೆಯಲ್ಲಿ ಸೇರಿಸಿದ್ದರಿಂದ ಮತ್ತು 49 ವರ್ಷ ವಯಸ್ಸಾಗಿರುವುದರಿಂದ ಮೊದಲ ಕ್ಲೇಮುದಾರನ ಮಗಳ ಕ್ಲೇಮನ್ನು ತನ್ನ ಪರಿಗಣನೆಯಿಂದ ಉಚ್ಚ ನ್ಯಾಯಾಲಯವು, ಹೊರಗಿಡಲಾಗುವುದಿಲ್ಲ. ಒಪ್ಪಿಕೊಂಡಿರುವ ಹಾಗೆ ಮೃತನು ಸಂಪೂರ್ಣ ಕುಟುಂಬವನ್ನು ನೋಡಿಕೊಳ್ಳುತ್ತಿದ್ದನು. ತಾಯಿಯ ವಯಸ್ಸನ್ನು ನಿರ್ಧರಿಸುವಾಗ, ಉಚ್ಚ ನ್ಯಾಯಾಲಯವು ಅದರಲ್ಲಿ ಯಾವುದೇ ವಿವಾದವಿಲ್ಲದಿರುವುದರಿಂದ, ಕ್ಲೇಮು ಅರ್ಜಿಯಲ್ಲಿ ನೀಡಲಾದಂತೆ ತಾಯಿಯ ವಯಸ್ಸನ್ನು 65 ಎಂದು ಒಪ್ಪಿಕೊಳ್ಳಬೇಕು, ಉಚ್ಚ ನ್ಯಾಯಾಲಯವು, ನೀಡಿದ ಕಾರಣವನ್ನು ಸರಿಯಾಗಿದೆಯೆಂದು ನಾವು ಒಪ್ಪಿಕೊಂಡಿದ್ದರೂ ಸಹ, ಗುಣಕವನ್ನು 6 ರಿಂದ 5ಕ್ಕೆ ಉಚ್ಚ ನ್ಯಾಯಾಲಯವು ಮತ್ತೆ ಇಳಿಸಿದೆ. ಸರಳ ವರ್ಮಾರ ಮೊಕದ್ದಮೆಯ ಅನುಪಾತದ ದೃಷ್ಟಿಯಲ್ಲಿ ಉಚ್ಚ ನ್ಯಾಯಾಲಯವು ನೀಡಿದ ಕಾರಣವು ಸರಿಯಾಗಿರುವುದಿಲ್ಲ. ಇದನ್ನು ಅನುಸರಿಸಿ, ಉಚ್ಚ ನ್ಯಾಯಾಲಯವು, ಮೃತರ ವಯಸ್ಸಿನ ಸಂಬಂಧದಲ್ಲಿ ಲೆಕ್ಕಹಾಕುವ ಕಾರ್ಯ ಮಾಡಬೇಕಿತ್ತು. ಹಾಗೆಯೇ ಉಚ್ಚ ನ್ಯಾಯಾಲಯದ ನಿರ್ಣಯವು ಸರಳ ವರ್ಮಾರ ಪ್ರಕರಣದ ಅನುಪಾತಕ್ಕೆ ವಿರುದ್ಧವಾಗಿದ್ದು, ಇದರ ಪ್ರಶ್ನೆಯು ಪ್ರಮುಖ ನಿರ್ಣಯವಾಗಿದ್ದು ಇದನ್ನು ನಾವು ಅನುಸರಿಸಬೇಕು".

ಮತ್ತು ಸರ್ವೋಚ್ಚ ನ್ಯಾಯಾಲಯ ***ಮುನ್ನಾ ಲಾಲ್ ಜೈನ್ ಹಾಗೂ ಮತ್ತೊಬ್ಬರು –ವಿರುದ್ಧ– ವಿಪಿನ್ ಕುಮಾರ್ ಶರ್ಮ ಮತ್ತು ಇತರರು***, ಮೇಲಿನ ಪ್ರಕರಣದ 12ನೇ ಕಂಡಿಕೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಹೀಗೆ ಅಭಿಪ್ರಾಯಪಟ್ಟಿರುತ್ತದೆ:

"ಸರಳಾ ವರ್ಮಾ ಪ್ರಕರಣದಲ್ಲಿ, 19ನೇ ಕಂಡಿಕೆಯಲ್ಲಿನ ದ್ವಿ–ಸದಸ್ಯ ಪೀಠದಲ್ಲಿ ಹಂತ 2ರಲ್ಲಿ ಈ ಸಂಗತಿಯು ದೃಷ್ಟಿಕೋನವನ್ನು ಕುರಿತದ್ದಾಗಿದೆ. ಉದ್ಧರಣೆ: (ಎಸ್‌ಸಿಸಿ ಪಿ.133)

"19 . . . . . . ಹಂತ 2 (ಗುಣಕವನ್ನು ಖಚಿತಪಡಿಸುವುದು)

ಮೃತರ ವಯಸ್ಸನ್ನು ಮತ್ತು ಸಕ್ರಿಯ ವೃತ್ತಿಯ ಅವಧಿಯನ್ನು ಗಮನದಲ್ಲಿಟ್ಟುಕೊಂಡು ಸೂಕ್ತ ಗುಣಕವನ್ನು ಆಯ್ಕೆ ಮಾಡಬೇಕು ಅಪಘಾತವಾಗದಿದ್ದಲ್ಲಿ, ಅವನು ಬದುಕಿರುತ್ತಿದ್ದ ಅಥವಾ ಕಾರ್ಯ ನಿರ್ವಹಿಸುತ್ತಿದ್ದ ವರ್ಷಗಳ ಸಂಖ್ಯೆಯನ್ನು ಖಚಿತಪಡಿಸುವುದು ಎಂದರ್ಥವಲ್ಲ, ಕೆಲವು ಬೆಲೆಕಟ್ಟಲಾಗದ ಜೀವನದ ಮತ್ತು ಆರ್ಥಿಕ ಸಂಗತಿಗಳನ್ನು ಗಮನದಲ್ಲಿಟ್ಟುಕೊಂಡು, ವಯಸ್ಸಿಗೆ ಸಂಬಂಧಿಸಿದ ಗುಣಕಗಳ ಕೋಷ್ಟಕವನ್ನು ಈ ನ್ಯಾಯಾಲಯವು ಗುರುತಿಸಿದೆ. ಮೃತರ ವಯಸ್ಸಿಗೆ ಸಂಬಂಧಪಟ್ಟ ಸದರಿ ಕೋಷ್ಟಕದಿಂದ ಗುಣಕವನ್ನು ಆಯ್ಕೆ ಮಾಡಬೇಕು."

ಆದುದರಿಂದ ನಾವು ನ್ಯಾಯಾಧಿಕರಣವು ಅವಲಂಬನೆಯ ನಷ್ಟದ ಸಂಬಂಧದಲ್ಲಿ ನೀಡಿದ 25,40,000/– ರೂ. ನಷ್ಟ ಪರಿಹಾರವು ನ್ಯಾಯ ಸಮ್ಮತ ಮತ್ತು ಯುಕ್ತವಾಗಿದೆ ಮತ್ತು ಇದು ಮಧ್ಯಪ್ರವೇಶವನ್ನು ಅಪೇಕ್ಷಿಸುವುದಿಲ್ಲ.

15. ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ನ್ಯಾಯವಾದಿಗಳು ಸರಿಯಾಗಿ ಗುರುತಿಸಲಾದಂತೆ ಸಾಂಪ್ರದಾಯಿಕ ಶೀರ್ಷಿಕೆ ಸಂಬಂಧದಲ್ಲಿ ನ್ಯಾಯಾಧಿಕರಣವು ನೀಡಿದ 45,000/– ರೂ. ನಷ್ಟ ಪರಿಹಾರವು ಕಡಿಮೆಯಿದ್ದು ಯುಕ್ತವಾಗಿ ಹೆಚ್ಚಿಸಲು ತಕ್ಕುದಾಗಿರುತ್ತದೆ. ಮೇಲೆ ಉಲ್ಲೇಖಿಸಲಾದಂಥ ಮತ್ತು ಸರ್ವೋಚ್ಚ ನ್ಯಾಯಾಲಯದ ಮತ್ತು ಈ ನ್ಯಾಯಾಲಯದ ಪರಿಗಣನೆಯಲ್ಲಿ ಮತ್ತು 2013ನೇ ವರ್ಷ ನಡೆದ ಅಪಘಾತದ ಸಂಗತಿಗಳು ಮತ್ತು ಸನ್ನಿವೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಾವು 1 ರಿಂದ 4 ರ ವರೆಗಿನ ಸಂಖ್ಯೆಯ ಪ್ರತಿಯೊಬ್ಬ

ಕ್ಲೇಮುದಾರನಿಗೆ 25,000/– ರೂ. ದರದಲ್ಲಿ ಪ್ರೀತಿ ವಾತ್ಸಲ್ಯದ ನಷ್ಟದ ಸಂಬಂಧದಲ್ಲಿ 1,00,000/– ರೂ. ಮೊತ್ತವನ್ನು, ಸಂಪದದ ನಷ್ಟದ ಸಂಬಂಧದಲ್ಲಿ 25,000/– ರೂ.ಗಳನ್ನು ಮತ್ತು ಸಾಗಣೆ ಮತ್ತು ಶವ ಸಂಸ್ಕಾರ ವೆಚ್ಚಗಳ ಸಂಬಂಧದಲ್ಲಿ 25,000/– ರೂ.ಗಳನ್ನು ನೀಡಲಾಗಿದೆ. ಒಟ್ಟಾರೆಯಾಗಿ ಕ್ಲೇಮುದಾರರು, ನ್ಯಾಯಾಧಿಕರಣವು ನೀಡಿದ 25,85,000/– ರೂ.ಗಳಿಗೆ ಬದಲಾಗಿ 26,90,000/– ರೂ.ಗಳ ಒಟ್ಟು ನಷ್ಟ ಪರಿಹಾರಕ್ಕೆ ಹಕ್ಕುಳ್ಳವರಾಗುವರು.

16. ಕ್ಲೇಮುದಾರರ ಪರವಾಗಿ ಹಾಜರಾಗಿರುವ ಮಾನ್ಯ ವಕೀಲರು ಸರಿಯಾಗಿ ಗುರುತಿಸಲಾದಂತೆ ಬಡ್ಡಿಗೆ ಸಂಬಂಧಿಸಿದಂತೆ ಅಪಘಾತವು 2013ನೇ ವರ್ಷದಲ್ಲಿ ಸಂಭವಿಸಿರುವುದರಿಂದ ನ್ಯಾಯಾಧಿಕರಣವು ಪ್ರತೀ ವರ್ಷ ನೀಡಿದ ಶೇಕಡಾ 6ರ ಬಡ್ಡಿಯು ಕಡಿಮೆಯಿರುತ್ತದೆ. ಸರ್ವೋಚ್ಚ ನ್ಯಾಯಾಲಯದ ಮತ್ತು ಈ ನ್ಯಾಯಾಲಯದ ತೀರ್ಪನ್ನು ಪರಿಗಣನೆಗೆ ತೆಗೆದುಕೊಂಡು ನಾವು ನ್ಯಾಯಾಧಿಕರಣವು ನೀಡಿದ ಶೇಕಡಾ 6ಕ್ಕೆ ಬದಲು ಸಂಪೂರ್ಣ ನಷ್ಟ ಪರಿಹಾರಕ್ಕೆ ಪ್ರತೀ ವರ್ಷಕ್ಕೆ ಶೇಕಡಾ 9ರ ದರವನ್ನು ನೀಡಿರುತ್ತೇವೆ.

17. ಈ ಮೊದಲು ಹೇಳಲಾದ ಕಾರಣಗಳಿಗಾಗಿ, ನಿಗಮವು ಸಲ್ಲಿಸಿದ ಅಪೀಲು ಮತ್ತು ಕ್ಲೇಮುದಾರರು ಸಲ್ಲಿಸಿದ ಅಪೀಲನ್ನು ಭಾಗಶಃ ಪುರಸ್ಕರಿಸಲಾಗಿದೆ.

ಲಘು ವ್ಯಾಜ್ಯಗಳು ಮತ್ತು ಎಸಿಎಂಎಂ ಮತ್ತು ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಾಧಿಕರಣದ ನ್ಯಾಯಾಧೀಶರು, ಬೆಂಗಳೂರು (ಎಸ್‌ಸಿಸಿಎಚ್–9) ಇವರು, ಎಂವಿಸಿ ಸಂ.2993/2013ರಲ್ಲಿ ಹೊರಡಿಸಲಾದ ದಿನಾಂಕ 14.11.2014ರ ಪ್ರಶ್ನಿತ ತೀರ್ಪು ಮತ್ತು ಐತೀರ್ಪನ್ನು ಈ ಮೂಲಕ 80:20ರ ಅನುಪಾತದಲ್ಲಿ ಎಂದರೆ ನಿಗಮಕ್ಕೆ ಸೇರಿದ ಬಸ್‌ನ ಚಾಲಕನಿಗೆ ಶೇಕಡಾ 80ರಷ್ಟು ಮತ್ತು ನೋಂದಣಿ ಸಂ.ಕೆಎ.02 ವಿ. 959ನ್ನು ಹೊಂದಿರುವ ಮೋಟಾರು ಬೈಕ್‌ನ ಮೃತ, ಚಾಲಕನಿಗೆ ಶೇಕಡಾ 20ರಷ್ಟು ಅನುಪಾತದಲ್ಲಿ ನಿರ್ಲಕ್ಷ್ಯತನವನ್ನು ನಿಗದಿಪಡಿಸುವ

ಮೂಲಕ ಹಾಗೂ ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಸಂಪೂರ್ಣ ನಷ್ಟಪರಿಹಾರವು ನಗದೀಕರಣವಾಗುವವರೆಗೆ ಪ್ರತೀ ವರ್ಷಕ್ಕೆ ಶೇಕಡಾ 9ರ ಬಡ್ಡಿಯೊಂದಿಗಿನ 25,85,000/– ರೂ.ಗಳ ಬದಲು 26,90,000/– ರೂ. ನಷ್ಟ ಪರಿಹಾರವನ್ನು ನೀಡುವ ಮೂಲಕ ಮಾರ್ಪಾಡುಗೊಳಿಸಲಾಗಿದೆ.

26,90,000/– ರೂ.ಗಳ ನಷ್ಟ ಪರಿಹಾರದಲ್ಲಿ, ಮೃತರ ನೋಂದಣಿ ಸಂ.ಕೆಎ 02 ವಿ. 959ನ್ನು ಹೊಂದಿರುವ ಮೋಟಾರು ಬೈಕ್ ಚಾಲಕನ ಕಡೆಯಿಂದಾದ ನಿರ್ಲಕ್ಷ್ಯತನಕ್ಕೆ ಸಂಬಂಧಿಸಿದಂತೆ ಶೇಕಡಾ 20ರಷ್ಟನ್ನು (5,38,000/– ಕಳೆದರೆ, ಉಳಿದ ನಷ್ಟ ಪರಿಹಾರ 21,52,500/– ರೂ.ಗಳಿಗೆ ಬರುತ್ತದೆ. 4,33,000/– ರೂ.ಗಳ ನಷ್ಟ ಪರಿಹಾರವನ್ನು (25,85,000 – 21,52,000/–) ಕಳೆದಂತಾಗುತ್ತದೆ. ನಿಗಮವು ಈ ತೀರ್ಪಿನ ಪ್ರತಿಯನ್ನು ಸ್ವೀಕರಿಸಿದ ದಿನಾಂಕದಿಂದ ಮೂರು ವಾರಗಳೊಳಗೆ, ತಾನು ಎಷ್ಟು ಹಣವನ್ನು ಇಂದಿನವರೆಗೆ ಜಮೆ ಮಾಡಿತ್ತೋ ಅಷ್ಟನ್ನು ಕಳೆದ ನಂತರ, ಅರ್ಜಿಯನ್ನು ಸಲ್ಲಿಸಿದ ದಿನಾಂಕದಿಂದ ಅದು ನಗದೀಕರಣವಾಗುವವರೆಗೆ ಪ್ರತೀ ವರ್ಷಕ್ಕೆ ಶೇಕಡಾ 9ರ ಬಡ್ಡಿಯೊಂದಿಗೆ ನಷ್ಟ ಪರಿಹಾರ ಮೊತ್ತವನ್ನು ಜಮೆ ಮಾಡಲು ನಿಗಮಕ್ಕೆ ನಿರ್ದೇಶನ ನೀಡಲಾಗಿದೆ.

ನ್ಯಾಯಾಧಿಕರಣವು ಆದೇಶಿಸಿದ ಬಟವಾಡೆಯ ಪಾಲು ಮತ್ತು ಬಟವಾಡೆಯ ರೀತಿಯು, ಈ ನ್ಯಾಯಾಲಯವು ಮಾಡಿದ ಇಳಿಕೆಯಷ್ಟರಮಟ್ಟಿಗೆ ಪ್ರಮಾಣಬದ್ಧವಾಗಿ ಇಳಿಕೆಯಾಗುತ್ತದೆ.

ನಿಗಮವು ಜಮೆ ಮಾಡಿದ ಮೊತ್ತವನ್ನು, ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಧಿಕರಣಕ್ಕೆ ಕೂಡಲೇ ರವಾನಿಸತಕ್ಕದ್ದು.

ತದನುಸಾರವಾಗಿ, ಐತೀರ್ಪನ್ನು ಪಡೆದುಕೊಳ್ಳುವುದು.

ಮುಖ್ಯ ವಿಷಯಗಳ ವಿಲೇವಾರಿಯನ್ನು ದೃಷ್ಟಿಯಲ್ಲಿಟ್ಟುಕೊಂಡು, ಎಂಎಫ್‌ಎ ಸಂ.1382/2015ರಲ್ಲಿ ಐ.ಎ.ಸಂ.2/2015ರಲ್ಲಿ ಕ್ಲೇಮುದಾರರು ಕೋರಿದ ಪರಿಹಾರವು ಪರಿಗಣನೆಗಾಗಿ ಉಳಿದಿರುವುದಿಲ್ಲ.

ಹಾಗಾಗಿ, ನಿರರ್ಥಕವೆಂದು ಇದನ್ನು ವಿಲೇವಾರಿ ಮಾಡಲಾಗಿದೆ.

ಮಾನ್ಯ ವಕೀಲರಾದ ಶ್ರೀ ಡಿ. ವಿಜಯಕುಮಾರ್ ಅವರಿಗೆ ಎಂಎಫ್‌ಎ ಸಂ.1820/2015ರಲ್ಲಿ ನಾಲ್ಕು ವಾರಗಳೊಳಗೆ ನಿಗಮದ ಪರವಾಗಿ ವಕಾಲತ್ತು ಸಲ್ಲಿಸಲು ಅನುಮತಿಸಲಾಗಿದೆ.